# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಹೆಚ್.ಎಂ ರಮೇಶ ಗೌಡ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : (134)
ಉತ್ತರಿಸಬೇಕಾದ ದಿನಾಂಕ : 08.12.2020

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋವಿಡ್ ಕಾರಣದಿಂದ ರಾಜ್ಯದ ಸಹಕಾರಿ ಸಂಸ್ಥೆಗಳು, ಬ್ಯಾಂಕುಗಳ ಮೇಲೆ ಆಗಿರುವ ಪರಿಣಾಮಗಳೇನು;<br>ವಹಿವಾಟಿನಲ್ಲಿ ಆದ ನಷ್ಟವೇನು; (ವಿವರವಾದ ಮಾಹಿತಿ ನೀಡುವುದು) | ಕೋವಿಡ್ ಕಾರಣದಿಂದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಠೇವಣಿಯಲ್ಲಿ ಕೃಷಿ ಮತ್ತು ಕೃಷಿಯೇತರ ಸಾಲ ವಿತರಣೆಯಲ್ಲಿ ಯಾವುದೇ ಕೊರತೆ ಉಂಟಾಗಿರುವುದಿಲ್ಲ, ಆದರೆ ಕೃಷಿಯೇತರ ಸಾಲ ವಸೂಲಾತಿಯಲ್ಲಿ ಸ್ವಲ್ಪ ಕುಂಠಿತ(−2.13) ಉಂಟಾಗಿದ್ದು, ವಿವರ ಕೆಳಕಂಡಂತಿರುತ್ತದೆ.<br>(ರೂ.ಕೋಟಿಗಳಲ್ಲಿ) |

| ವಿವರ | ದಿ:01.04.2019 ರಿಂದ ದಿ:30.11.2019 ರವರೆಗೆ | ದಿ:01.04.2020 ರಿಂದ ದಿ:30.11.2020 ರವರೆಗೆ | ವ್ಯತ್ಯಾಸ |
|---|---|---|---|
| ಠೇವಣಿ | 21577.47 | 24763.67 | 3186.46 |
| ಕೃಷಿ ಸಾಲ ವಿತರಣೆ | 7912.95 | 10086.61 | 2173.92 |
| ಕೃಷಿಯೇತರ ಸಾಲ ವಿತರಣೆ | 6318.16 | 6346.41 | 28.51 |
| ಕೃಷಿ ಸಾಲ ವಸೂಲಾತಿ (ವರ್ಷದ ಶೇಕಡವಾರು) | 58.49 | 61.15 | 3.89 |
| ಕೃಷಿಯೇತರ ಸಾಲ ವಸೂಲಾತಿ (ವರ್ಷದ ಶೇಕಡವಾರು) | 54.45 | 51.08 | −2.13 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ ಎರಡು ವರ್ಷಗಳಲ್ಲಿ ಸಹಕಾರಿ ಬ್ಯಾಂಕುಗಳಲ್ಲಿ ಎಷ್ಟು ರೈತರ ಸಾಲ ಮನ್ನಾ ಆಗಿದೆ; (ಅಂಕಿ ಅಂಶಗಳ ಸಹಿತ ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಇದುವರೆಗೆ 17.06 ಲಕ್ಷ ಅರ್ಹ ರೈತರನ್ನು ಗುರುತಿಸಿ ರೂ.7987.47 ಕೋಟಿಗಳ ಸಾಲ ಮನ್ನಾ ಮಾಡಲಾಗಿದೆ. ಈ ಪೈಕಿ 16.49 ಲಕ್ಷ ರೈತರಿಗೆ ರೂ.7692.32 ಕೋಟಿಗಳನ್ನು ರೈತರ ಖಾತೆಗಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ರೂ.295.15 ಕೋಟಿಗಳನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. |
| ಇ) | ಸಹಕಾರಿ ಬ್ಯಾಂಕುಗಳಲ್ಲಿ ರೈತರ ಸಾಲ ಮನ್ನಾ ಅರ್ಜಿ ವಿಲೇವಾರಿ ಆಗದಿರಲು ಕಾರಣಗಳೇನು; (ವಿವರ ನೀಡುವುದು) | ಸಹಕಾರ ಸಂಘಗಳಲ್ಲಿ ಇನ್ನೂ ಅಂದಾಜು 62056 ರೈತರ ಸಾಲ ಮನ್ನಾ ಅರ್ಜಿ ವಿಲೇವಾರಿ ಆಗಲು ಬಾಕಿ ಇದ್ದು, ಕಾರಣಗಳನ್ನು ಈ ಕೆಳಗೆ ನೀಡಲಾಗಿದ್ದು, ಇವುಗಳನ್ನು ಸರಿಪಡಿಸಲು ಕ್ರಮವಹಿಸಲಾಗುತ್ತಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. |

| | | |
|---|---|---|
| | | 1. ಸಾಲ ಮನ್ನಾ ಯೋಜನೆಯಲ್ಲಿ ಕುಟುಂಬಕ್ಕೆ ರೂ.1.00 ಲಕ್ಷಗಳ ಸಾಲ ಮನ್ನಾ ಸೌಲಭ್ಯ ಪಡೆಯಲು ರೂ.20,000/-ಗಳಿಗಿಂತ ಹೆಚ್ಚಿನ ಮಾಸಿಕ ವೇತನ/ಪಿಂಚಣಿ/ಆದಾಯ ತೆರಿಗೆದಾರರನ್ನು ಮತ್ತು ರೂ.1.00 ಲಕ್ಷಗಳಿಗಿಂತ ಹೆಚ್ಚಿನ ಅಸಲು ಅಥವಾ ಸುಸ್ತಿ ಬಡ್ಡಿ ಪಾವತಿಸದೇ ಇರುವ ರೈತರನ್ನು ಯೋಜನೆಯಿಂದ ಹೊರಗಿಡುವ ಸಲುವಾಗಿ ಸಹಕಾರ ಸಂಘಗಳು ರೈತರಿಂದ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಆರ್.ಟಿ.ಸಿ ದಾಖಲೆಗಳೊಂದಿಗೆ ಸ್ವಯಂ ದೃಢೀಕರಣ ಪತ್ರವನ್ನು ಪಡೆದು ಈ ಮಾಹಿತಿಯನ್ನು ಸಾಲ ಮನ್ನಾ ತಂತ್ರಾಂಶದಲ್ಲಿ ಅಳವಡಿಸಬೇಕಿದ್ದು, ರೈತರು ಸಲ್ಲಿಸಿದ ದಾಖಲೆಗಳು ಸಂಬಂಧಪಟ್ಟ ಇಲಾಖೆಯ ದತ್ತಾಂಶದೊಂದಿಗೆ ತಾಳೆಯಾಗಿರುವುದಿಲ್ಲ.<br>2. ರೈತರು ಸಾಲ ಮನ್ನಾ ಘೋಷಣೆ ದಿನಾಂಕಕ್ಕೆ ರೇಷನ್ ಕಾರ್ಡ್ ಹೊಂದದೇ ಇದ್ದು, ಅವರು ಹೊಸದಾಗಿ ರೇಷನ್ ಕಾರ್ಡ್‌ಗಳನ್ನು ಪಡೆದು ಇತ್ತೀಚಿಗೆ ಸಹಕಾರ ಸಂಘಗಳಿಗೆ ಸಲ್ಲಿಸಿದ್ದು, ಈ ರೇಷನ್ ಕಾರ್ಡ್‌ನಲ್ಲಿನ ಕುಟುಂಬದ ಸದಸ್ಯರನ್ನು ಗುರುತಿಸಲಾಗುತ್ತಿದೆ. |
| ಈ) | ಪ್ರಸಕ್ತ ಸಾಲಿನಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಎಷ್ಟು ಹಣ ಖರ್ಚಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ಸಹಕಾರ ಕ್ಷೇತ್ರ ಮತ್ತು ಸದಸ್ಯರ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಲ್ಲಿ ಬಿಡುಗಡೆ ಮಾಡಿದ ಮತ್ತು ವೆಚ್ಚ ಮಾಡಿದ ಅನುದಾನದ ವಿವರವನ್ನು ಈ ಕೆಳಗೆ ನೀಡಲಾಗಿದೆ.<br>1. ಆತ್ಮ ನಿರ್ಭರ್ ಯೋಜನೆ– Agri Infra Fund<br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು 'Multi Service centre'ಗಳನ್ನಾಗಿ ಪರಿವರ್ತಿಸಿ ರೈತರ ಜಮೀನುಗಳಿಗೆ ಕೊಯ್ಲೋತರ ಸಂಸ್ಕರಣೆ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ 826 ಪ್ಯಾಕ್ಸ್‌ಗಳಿಂದ 308.64 ಕೋಟಿಗಳ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದು, ಈ ಪೈಕಿ ನಬಾರ್ಡ್ 383 ಪ್ಯಾಕ್ಸ್‌ಗಳಿಗೆ ರೂ.127.17 ಕೋಟಿಗಳ ಸಾಲ ಮಂಜೂರು ಮಾಡಿರುತ್ತದೆ. ಈ ಸಾಲವನ್ನು ಡಿಸಿಸಿ ಬ್ಯಾಂಕುಗಳು ಪ್ಯಾಕ್ಸ್‌ಗಳಿಗೆ ಸಾಲ ಮಂಜೂರು ನೀಡಿ ವೆಚ್ಚ ಮಾಡಲು ಬಾಕಿ ಇರುತ್ತದೆ.<br>2. Special liquidity Fund<br>3. ಕೋವಿಡ್ ಪರಿಣಾಮದ ಸಲುವಾಗಿ ನಬಾರ್ಡ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ರೈತರಿಗೆ ಸಕಾಲದಲ್ಲಿ ಬೆಳೆ ಸಾಲ ವಿತರಿಸಲು ಅನುಕೂಲವಾಗುವಂತೆ ಸದ್ಯ ಒದಗಿಸುತ್ತಿರುವ ಪುನರ್ಧನದ ಜೊತೆಯಲ್ಲಿ ರೂ.17.00 ಕೋಟಿಗಳ Special liquidity Fund ನ್ನೂ ಸಹ ಪುನರ್ಧನ ಬಿಡುಗಡೆ ಮಾಡಿದ್ದು, ಪೂರ್ಣ ಮೊತ್ತವನ್ನು ವೆಚ್ಚ ಮಾಡಲಾಗಿದೆ. |

| | | |
|---|---|---|
| | | ಮೇಲಿನ ಯೋಜನೆಗಳ ಜಿಲ್ಲಾವಾರು ವಿವರವನ್ನು **ಅನುಬಂಧ-02** ಮತ್ತು **ಅನುಬಂಧ-02(ಅ)** ರಲ್ಲಿ ನೀಡಲಾಗಿದೆ.<br>ರಾಜ್ಯ ಸರ್ಕಾರದಿಂದ ಸಹಕಾರ ಕ್ಷೇತ್ರ ಮತ್ತು ಸದಸ್ಯರ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಲ್ಲಿ ನವೆಂಬರ್ ಅಂತ್ಯದವರೆಗೆ ಬಿಡುಗಡೆ ಮಾಡಿದ ಮತ್ತು ವೆಚ್ಚ ಮಾಡಿದ ಅನುದಾನದ ವಿವರವನ್ನು ಈ ಕೆಳಗೆ ನೀಡಲಾಗಿದೆ.<br>1. **ಕೃಷಿ ಸಾಲಗಳ ಮೇಲಿನ ಬಡ್ಡಿ ಸಹಾಯಧನ ಯೋಜನೆ:-**<br>2020-21ನೇ ಸಾಲಿನಲ್ಲಿ ಸರ್ಕಾರ ಇದುವರೆಗೆ ರೂ.99250 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br>2. **ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆ:-**<br>2020-21ನೇ ಸಾಲಿನಲ್ಲಿ ಸರ್ಕಾರ ಇದುವರೆಗೆ ರೂ.18911.5 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br>3. **ಸ್ವ-ಸಹಾಯ ಗುಂಪುಗಳ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ:-**<br>2020-21ನೇ ಸಾಲಿನಲ್ಲಿ ಸರ್ಕಾರ ಇದುವರೆಗೆ ರೂ.8650 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. |

**ಸಂಖ್ಯೆ: ಸಿಒ 388 ಸಿಎಲ್‌ಎಸ್ 2020**

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ-1

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಹೆಚ್.ಎಂ. ರಮೇಶ್ ಗೌಡ, (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 134 ಕ್ಕೆ ಅನುಬಂಧ**

**ಸಹಕಾರ ಸಂಘಗಳ ರೂ.1 ಲಕ್ಷಗಳ ವರೆಗಿನ ಬೆಳೆ ಸಾಲ ಮನ್ನಾ ಯೋಜನೆಯಲ್ಲಿ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ** (ರೂ.ಕೋಟಿಗಳಲ್ಲಿ)

| ಕ್ರ ಸಂ | ಜಿಲ್ಲೆಯ ಹೆಸರು | ರೂ.1 ಲಕ್ಷಗಳ ಬೆಳೆ ಸಾಲ ಮನ್ನಾ ಆದ ರೈತರ ವಿವರ | | ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಿದ ಅನುದಾನ | | ಅರ್ಜಿ ವಿಲೇವಾರಿ ಆದಗೇ ಇರುವ ರೈತರ ಸಂಖ್ಯೆ |
|---|---|---|---|---|---|---|
| | | ರೈತರ ಸಂಖ್ಯೆ | ಸಾಲ ಮನ್ನಾ ಮೊತ್ತ | ರೈತರ ಸಂಖ್ಯೆ | ಸಾಲ ಮನ್ನಾ ಮೊತ್ತ | |
| 1 | ಬಾಗಲಕೋಟೆ | 129856 | 695.21 | 121029 | 644.27 | 5303 |
| 2 | ಬೆಂಗಳೂರು ಗ್ರಾ. | 16830 | 79.02 | 16337 | 76.56 | 174 |
| 3 | ಬೆಂಗಳೂರು ನಗರ | 7695 | 39.29 | 7257 | 36.94 | 184 |
| 4 | ಬೆಳಗಾವಿ | 265690 | 1050.08 | 260330 | 1022.09 | 8860 |
| 5 | ಬಳ್ಳಾರಿ | 62797 | 365.30 | 61043 | 353.02 | 1615 |
| 6 | ಬೀದರ್ | 101882 | 422.31 | 97808 | 402.25 | 3923 |
| 7 | ವಿಜಯಪುರ | 148831 | 611.82 | 138858 | 567.30 | 5682 |
| 8 | ಚಾಮರಾಜನಗರ | 16421 | 100.54 | 16089 | 98.33 | 967 |
| 9 | ಚಿಕ್ಕಬಳ್ಳಾಪುರ | 11113 | 86.74 | 11065 | 86.31 | 60 |
| 10 | ಚಿಕ್ಕಮಗಳೂರು | 26192 | 171.63 | 25541 | 166.83 | 486 |
| 11 | ಚಿತ್ರದುರ್ಗ | 34909 | 159.49 | 33742 | 152.38 | 366 |
| 12 | ದಕ್ಷಿಣ ಕನ್ನಡ | 58380 | 432.81 | 58065 | 430.20 | 3520 |
| 13 | ದಾವಣಗೆರೆ | 60457 | 206.34 | 57509 | 194.70 | 2320 |
| 14 | ಧಾರವಾಡ | 13743 | 56.98 | 13156 | 54.13 | 221 |
| 15 | ಗದಗ | 16055 | 62.29 | 15649 | 60.54 | 952 |
| 16 | ಕಲಬುರಗಿ | 41043 | 112.46 | 39266 | 108.10 | 5278 |
| 17 | ಹಾಸನ | 114019 | 470.16 | 111710 | 458.94 | 1851 |
| 18 | ಹಾವೇರಿ | 20852 | 67.33 | 20502 | 66.04 | 297 |
| 19 | ಕೊಡಗು | 27995 | 218.23 | 26416 | 204.95 | 1645 |
| 20 | ಕೋಲಾರ | 9783 | 87.45 | 9691 | 86.62 | 194 |
| 21 | ಕೊಪ್ಪಳ | 22313 | 93.25 | 21869 | 90.76 | 316 |
| 22 | ಮಂಡ್ಯ | 105945 | 492.95 | 103113 | 478.28 | 3156 |
| 23 | ಮೈಸೂರು | 49430 | 326.33 | 48537 | 319.75 | 2189 |
| 24 | ರಾಯಚೂರು | 47600 | 223.32 | 45783 | 213.02 | 1473 |
| 25 | ರಾಮನಗರ | 36358 | 167.12 | 35328 | 162.08 | 574 |
| 26 | ಶಿವಮೊಗ್ಗ | 31416 | 127.59 | 30809 | 124.48 | 1303 |
| 27 | ತುಮಕೂರು | 116401 | 411.98 | 112186 | 393.94 | 4809 |
| 28 | ಉಡುಪಿ | 21149 | 145.44 | 21050 | 144.66 | 966 |
| 29 | ಉತ್ತರ ಕನ್ನಡ | 79146 | 477.44 | 78089 | 470.28 | 2186 |
| 30 | ಯಾದಗಿರಿ | 11748 | 26.59 | 10993 | 24.58 | 1186 |
| | ಒಟ್ಟು | **1706049** | **7987.47** | **1648820** | **7692.32** | **62056** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)

ಅನುಬಂಧ -[illegible] 2

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಹೆಚ್.ಎಂ. ರಮೇಶ್ ಗೌಡ, (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 134 ಕ್ಕೆ ಅನುಬಂಧ**

**ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಆತ್ಮ ನಿರ್ಭರ್ ಯೋಜನೆಯಡಿಯಲ್ಲಿ ಮಂಜೂರಾಗಿರುವ (Agri infra Fund)ಸಾಲದ ವಿವರ (ರೂ.ಕೋಟಿಗಳಲ್ಲಿ)**

| ಕ್ರ. ಸಂ | ಜಿಲ್ಲೆಯ ಹೆಸರು | ಸಹಕಾರ ಸಂಘಗಳು ಸಲ್ಲಿಸಿದ ಅರ್ಜಿ | | ನಬಾರ್ಡ್ ನಿಂದ ಮಂಜೂರಾದ ಸಾಲದ ಮೊತ್ತ | |
|---|---|---|---|---|---|
| | | ಸಂಘಗಳ ಸಂಖ್ಯೆ | ಸಾಲದ ಮೊತ್ತ | ಸಂಘಗಳ ಸಂಖ್ಯೆ | ಸಾಲದ ಮೊತ್ತ |
| 1 | Belgaum | 110 | 34.37 | 31 | 8.71 |
| 2 | Vijaypur | 19 | 5.79 | 9 | 1.53 |
| 3 | Bagalkote | 60 | 23.42 | 20 | 9.99 |
| 4 | Dharwad | 40 | 15.12 | 26 | 10.32 |
| 5 | Gadag | 0 | 0.00 | 0 | 0.00 |
| 6 | Haveri | 0 | 0.00 | 0 | 0.00 |
| 7 | U. Kannada | 5 | 5.29 | 3 | 3.04 |
| 8 | Mysore | 33 | 9.33 | 4 | 1.36 |
| 9 | Chamaraja Nagar | 0 | 0.00 | 0 | 0.00 |
| 10 | Mandya | 58 | 17.77 | 21 | 8.02 |
| 11 | Hassan | 76 | 17.79 | 62 | 17.13 |
| 12 | Chikkamagalore | 20 | 9.07 | 3 | 0.54 |
| 13 | Kodagu | 27 | 24.02 | 3 | 1.80 |
| 14 | D.K | 53 | 46.97 | 23 | 15.88 |
| 15 | Udupi | 0 | 0.00 | 0 | 0.00 |
| 16 | Bangalore | 16 | 8.87 | 1 | 0.40 |
| 17 | Kolar | 48 | 18.40 | 46 | 17.28 |
| 18 | Tumkur | 52 | 10.45 | 13 | 2.18 |
| 19 | Chitradurga | 34 | 7.69 | 21 | 5.29 |
| 20 | Davanagere | 28 | 8.52 | 11 | 2.49 |
| 21 | Shimoga | 20 | 13.05 | 7 | 3.60 |
| 22 | Bellary | 23 | 4.21 | 12 | 2.30 |
| 23 | Bidar | 58 | 9.94 | 50 | 9.01 |
| 24 | Kalburgi | 0 | 0.00 | 0 | 0.00 |
| 25 | Yadgiri | 0 | 0.00 | 0 | 0.00 |
| 26 | RAICHUR | 46 | 18.57 | 17 | 6.30 |
| 27 | KOPPAL | 0 | 0.00 | 0 | 0.00 |
| | Total | **826** | **308.64** | **383** | **127.17** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)